

ಡಾ. ಎಸ್. ರಾಮಮೂರ್ತಿ

# 3-12-2015ರಿಂದ 9-12-2015ರವರೆಗೆ




ಕೆಲಸಗಳು ಸರಾಗವಾಗಿ ನಡೆಯುವುದು. ವ್ಯಾಪಾರದಲ್ಲಿ ನಿರೀಕ್ಷಿತ ಲಾಭ ನೀಡುವುವು. ಆಟ ಪಾಠಗಳಲ್ಲಿ ಪ್ರಗತಿ ಲಭಿಸುವುದು. ಹಿತಕರ ಘಟನೆಗಳಿಂದ ಕುಟುಂಬದಲ್ಲಿ ಸಂತಸದ ವಾತಾವರಣ ಮೂಡುವುದು. ಹಿರಿಯರಿಂದ ಮಾರ್ಗದರ್ಶನ. ನ್ಯಾಯಾಲಯದ ವಿಚಾರದಲ್ಲಿ ಸಮಾಧಾನ ಪ್ರಾಪ್ತಿಯಾಗುವುದು, ಹಿತ ಸುದ್ದಿ. ಶುಭದಿನ: 12; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ಭಯ. ಅಕಾಲಭೋಜನ, ಉದ್ಯೋಗದಲ್ಲಿ ಅಶಾಂತಿ. ಕ್ರಯ ವಿಕ್ರಯಗಳಲ್ಲಿ ಹಾನಿ. ವಾರದ ಮಧ್ಯಭಾಗದಿಂದ ಅನುಕೂಲ. ಮನೋಬಲ ಹೆಚ್ಚುವುದು. ಕಾರ್ಯ ಕಲಾಪಗಳಲ್ಲಿ ಸಫಲತೆ. ವ್ಯಾಪಾರದಲ್ಲಿ ಲಾಭ. ವಿಶೇಷ ವಿಚಾರಗಳ ಪತ್ರಾಗಮನ. ಪ್ರಯಾಣ ಸೌಖ್ಯ. ಗೌರವ ಪ್ರಾಪ್ತಿ. ಶುಭದಿನ: 6; ಶಿವ, ಸುಬ್ರಹ್ಮಣ್ಯ ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ಬೇಸರ. ನಿಗದಿತ ಸಮಯಕ್ಕೆ ಹಾಜರಾಗಲು ಸಾಧ್ಯವಾಗುವುದಿಲ್ಲ. ವಾಹನಗಳಿಂದ ತೊಂದರೆ. ವೃತ್ತಿ ವ್ಯವಹಾರಗಳಲ್ಲಿ ಹಿನ್ನಡೆ. ವಾರದ ಮಧ್ಯಭಾಗದಿಂದ ಅನುಕೂಲ. ಸಂತಸ, ಶ್ರಮವಿಲ್ಲದೆ ಕಾರ್ಯ ಸಿದ್ಧಿ. ವ್ಯಾಪಾರದಲ್ಲಿ ಲಾಭ. ಹಿತೈಷಿಗಳ ಆಗಮನ. ಮಕ್ಕಳು ಹೇಳಿದಂತೆ ನಡೆದುಕೊಳ್ಳುವರು. ಶುಭದಿನ: 7; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ.




ವಾರದ ಮಧ್ಯಭಾಗದವರೆಗೂ ಅನುಕೂಲ. ಸರಾಗವಾಗಿ ನಡೆಯುವ ಕಾರ್ಯಗಳು. ವ್ಯಾಪಾರದಲ್ಲಿ ಲಾಭ ವೃದ್ಧಿ. ಆತ್ಮೀಯರಿಂದ ಸಹಾಯ. ಪ್ರಯಾಣದಲ್ಲಿ ನಿರಾತಂಕ. ಕಚೇರಿಗಳಿಂದ ಮಾರ್ಗದರ್ಶನ. ಹಿತ ವಾರ್ತೆ. ವಾರಾಂತ್ಯದಲ್ಲಿ ಒತ್ತಡ. ಕೋಪತಾಪದ ವರ್ತನೆ. ಅಕಾಲ ಭೋಜನ. ಅಧಿಕ ಖರ್ಚು, ಶತ್ರುಭೀತಿ. ಶುಭದಿನ: 5; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ.




ಉದ್ಯೋಗ ವೃತ್ತಿಗಳಲ್ಲಿ ಮುನ್ನಡೆ. ವ್ಯಾಪಾರ ವಹಿವಾಟುಗಳಲ್ಲಿ ಲಾಭ ವೃದ್ಧಿ. ದೃಢ ನಿರ್ಧಾರಗಳನ್ನು ತೆಗೆದುಕೊಳ್ಳುವಿಕೆ. ಅಧ್ಯಯನದಲ್ಲಿ ಆಸಕ್ತಿ ಹೆಚ್ಚುವುದು. ದೇವತಾಕ್ಷೇತ್ರ ಪ್ರವಾಸ ಯೋಜನೆ. ಗುರುಹಿರಿಯರಿಂದ ಸಲಹೆ. ವಾಹನ ಯಂತ್ರೋಪಕರಣಗಳು ಸುಸ್ಥಿತಿಯಲ್ಲಿ. ತಾಳ್ಮೆ ಹೆಚ್ಚುವುದು. ಶುಭದಿನ: 6; ಗಣಪತಿ, ಗುರು ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ಬೇಸರ. ಕೆಲಸದಲ್ಲಿ ನಿರಾಸಕ್ತಿ. ಮಿತ್ರರ ಮೇಲೆ ಕೋಪ. ಲೇವಾದೇವಿಗಳಲ್ಲಿ ಹಿನ್ನಡೆ. ವಿಳಂಬ ಸಂದೇಶ. ವಾರದ ಮಧ್ಯಭಾಗದಿಂದ ಸಮಾಧಾನ. ಸ್ಥಿರ ಮನಸ್ಸು. ವೃತ್ತಿ ಪ್ರವೃತ್ತಿಗಳಲ್ಲಿ ಸಫಲತೆ. ಹಣದ ಮುಗ್ಗಟ್ಟು ಬಗೆಹರಿಯವುದು. ವಿರೋಧಿಗಳು ತಟಸ್ಥರಾಗುವರು. ಕುಟುಂಬ ಸದಸ್ಯರಲ್ಲಿ ಒಮ್ಮತ. ಶುಭದಿನ: 7; ಗಣಪತಿ, ದುರ್ಗಾ ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ಚಂಚಲತೆ. ಸೋಮಾರಿತನ. ಕೆಲಸಗಳು ಸಮಯಕ್ಕೆ ಸರಿಯಾಗಿ ಪೂರ್ಣವಾಗುವುದಿಲ್ಲ. ಲೇವಾದೇವಿಗಳಲ್ಲಿ ಹಿನ್ನಡೆ. ವಾರದ ಮಧ್ಯಭಾಗದಿಂದ ಚೇತರಿಕೆ. ಪತ್ರ ವ್ಯವಹಾರಗಳಲ್ಲಿ ಪ್ರಗತಿ. ಸಂಶೋಧನೆಯಲ್ಲಿ ಆಸಕ್ತಿ. ಏಕಾಗ್ರತೆ ಹೆಚ್ಚುವುದು. ವೃತ್ತಿ ವಹಿವಾಟುಗಳಲ್ಲಿ ಮುನ್ನಡೆ. ಪ್ರೀತಿ ಪಾತ್ರರಿಂದ ಸಹಾಯ. ಶುಭದಿನ: 7; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ಸಂತಸ. ಕುಟುಂಬ ಸದಸ್ಯರಲ್ಲಿ ಹೊಂದಾಣಿಕೆ. ಉದ್ಯೋಗ ವೃತ್ತಿಗಳಲ್ಲಿ ಸಮಾಧಾನ. ಲೇವಾದೇವಿಗಳಲ್ಲಿ ಲಾಭ. ವಾರದ ಮಧ್ಯಭಾಗದಲ್ಲಿ ಕಷ್ಟ. ವಿರೋಧಿಗಳಿಂದ ಉಪದ್ರವ್ಯ. ಹಿರಿಯರೊಂದಿಗೆ ವಾದ ವಿವಾದ. ವಾಹನಗಳಿಂದ ಖರ್ಚು. ಅಹಿತ ಸಂದೇಶ. ವಾರಾಂತ್ಯದಲ್ಲಿ ಸಮಾಧಾನ, ಸೌಖ್ಯ. ಶುಭದಿನ: 4; ಗಣಪತಿ, ಶಿವ ಅಷ್ಟೋತ್ತರ ಪಠಿಸಿ.




ಒತ್ತಡ ನಿವಾರಣೆಯಾಗುವುದು. ಕಾರ್ಯ ಕಲಾಪಗಳು ಯಶಸ್ವಿಯಾಗುವುದು. ಕ್ರಯ ವಿಕ್ರಯಗಳಲ್ಲಿ ಲಾಭ ಪ್ರಾಪ್ತಿಯಾಗುವುದು. ಬಂಧು ಮಿತ್ರರ ಮೇಲಿನ ಕೋಪತಾಪ ಶಮನವಾಗುವುದು. ತಕರಾರುಗಳು ಬಗೆಹರಿಯುವುದು. ಮಕ್ಕಳ ಅಭಿವೃದ್ಧಿಯಾಗುವುದು. ಪಾಲುದಾರಿಕೆ ವ್ಯವಹಾರಗಳು ಮುಂದುವರಿಯುವುವು. ಶುಭದಿನ: 7; ಗಣಪತಿ, ಶಿವ ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ಒತ್ತಡ, ನಿದ್ರಾಹೀನತೆ. ಅಹಿತ ಭೋಜನ. ವೃತ್ತಿ ಪ್ರವೃತ್ತಿಗಳಲ್ಲಿ ಅಸಮಾಧಾನ. ಮಿತ್ರರಿಂದ ಅಸಹಕಾರ. ವಾರದ ಮಧ್ಯಭಾಗದಿಂದ ಸಂತಸ. ಆತ್ಮಬಲ ಹೆಚ್ಚುವುದು. ಶ್ರಮವಿಲ್ಲದೆ ಕಾರ್ಯ ಸಿದ್ಧಿ. ವ್ಯಾಪಾರದಲ್ಲಿ ಸೂಕ್ತ ಲಾಭ. ವಾಹನ ಯಂತ್ರೋಪಕರಣಗಳು ಸುಸ್ಥಿತಿಯಲ್ಲಿ. ಹಿತ ವಾರ್ತೆ. ಶುಭದಿನ: 7; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ಹಣದ ಮುಗ್ಗಟ್ಟು. ಕೋಪದ ಮಾತುಗಳು. ವಿಪರೀತ ಶ್ರಮ. ವೃತ್ತಿ ವ್ಯವಹಾರಗಳಲ್ಲಿ ಒತ್ತಡ. ಆರೋಗ್ಯ ವ್ಯತ್ಯಯ. ವಾರದ ಮಧ್ಯಭಾಗದಿಂದ ಮನಶಾಂತಿ. ಹಿರಿಯರ ಜತೆ ಸಮಾಲೋಚನೆ. ಉದ್ಯೋಗದಲ್ಲಿ ಸಮಾಧಾನ. ವ್ಯಾಪಾರದಲ್ಲಿ ಲಾಭ ವೃದ್ಧಿ. ಮನರಂಜನೆ ಕಾರ್ಯ ಕ್ರಮಗಳಲ್ಲಿ ಆಸಕ್ತಿ. ಶುಭದಿನ: 7; ಗಣಪತಿ, ದುರ್ಗಾ ಅಷ್ಟೋತ್ತರ ಪಠಿಸಿ.




ವಾರದ ಮಧ್ಯಭಾಗದವರೆಗೂ ಸಂತಸ. ಪ್ರೀತಿ ಪಾತ್ರರ ಭೇಟಿ. ಕೆಲಸದಲ್ಲಿ ಪ್ರಗತಿ. ಲೇವಾದೇವಿಗಳಲ್ಲಿ ಲಾಭ. ವಿರೋಧಿಗಳು ಹಿಂದೆ ಸರಿಯುವರು. ಅಪಾಯಗಳಿಂದ ಪಾರಾಗುವಿಕೆ. ವಾಹನ ಸೌಖ್ಯ. ಹಿತಕರ ವಾರ್ತೆ. ವಾರಾಂತ್ಯದಲ್ಲಿ ಅಧಿಕ ಖರ್ಚು. ವಸ್ತ್ರಾಭರಣ ವಿಚಾರದಲ್ಲಿ ಕಲಹ. ಉದ್ಯೋಗ ವೃತ್ತಿ ವ್ಯಾಪಾರದಲ್ಲಿ ಒತ್ತಡ. ಶುಭದಿನ: 6; ಗಣಪತಿ, ದತ್ತಾತ್ರೇಯ ಅಷ್ಟೋತ್ತರ ಪಠಿಸಿ.